has intimated that the Taluk Development Boards of Hubli, Kalghatgi, Navalgund, Ron and Kundgol have so far appointed mechanics of their own. It is also stated that action is being taken to appoint a mechanic to each of the other Taluk Development Boards, where there are more than 25 bore-wells.

The Deputy Commissioner, Dharwar, has been requested to see that all the remaining Taluk Development Boards appoint a mechanic to each Taluk Development Boards immediately and to see that the remaining 184 hand pumps/powerpumps which are out of order are repaired and the bore-wells put into effective use for the benefit of the villagers. The Chief Engineer, Minor Irrigation and Public Health Engineering, Bangalore has also been requested to get the defunct handpumps/ power pumps repaired through his personnel, till the Taluk Development Boards appoint their own mechanics. The Public Health Engineering Department has also been requested to see that the remaining successful bore-wells are fitted with hand-pumps/power-pumps.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ ಸರ್ಕಾರದವರು ೧೬ನೇ ಏಪ್ರಿಲ್ ೧೯೭೫, ೨೮ನೇ ಏಪ್ರಿಲ್ ೧೯೭೫ ಮತ್ತು ೧೧ನೇ ಜೂನ್ ೧೯೭೫ ಈ ಆರ್ಡರ್ ಪ್ರಕಾರ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮತ್ತು ಬಿ. ಡಿ. ಒ. ಗಳಿಗೂ ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ ನೇಮಿಸಬೇಕೆಂದು ತಿಳಿಸಿದ್ದಾರೆ. ಆದಾಗ್ಯೂ ಧಾರವಾಡ ಜಿಲ್ಲೆಯಲ್ಲಿ ಇರುವ ೧೭ ತಾಲ್ಲೂಕುಗಳಲ್ಲಿ ೫ ತಾಲ್ಲೂಕುಗಳಲ್ಲಿ ಮಾತ್ರ ಬಿ. ಡಿ. ಒ. ಅವರು ಮೆಕ್ಯಾನಿಕ್‌ಗಳನ್ನು ನೇಮಿಸಿದ್ದಾರೆ. ಇನ್ನು ೧೨ ತಾಲ್ಲೂಕುಗಳಲ್ಲಿ ಮೆಕ್ಯಾನಿಕ್‌ಗಳನ್ನು ನೇಮಿಸಿಲ್ಲ. ಸರ್ಕಾರದವರಿಂದ ಮೆಕ್ಯಾನಿಕ್‌ಗಳನ್ನು ನೇಮಿಸಬೇಕು ಎಂದು ಆಜ್ಞೆ ಮಾಡಿದರೂ ಕೂಡ ಅಧಿಕಾರಿಗಳು ಬೇಜವಾಬ್ದಾರಿಯಿಂದ ಮೆಕ್ಯಾನಿಕ್‌ಗಳನ್ನು ನೇಮಿಸಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ತೀವ್ರವಾಗಿ ಕೆಟ್ಟು ಹೋಗಿರತಕ್ಕ ಪಂಪುಸೆಟ್ಟುಗಳನ್ನು ರಿಪೇರಿ ಮಾಡಿದ್ದರೆ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೀರಾ ? ಈಗ ತಾವು ೩ ಸರ್ಕ್ಯುಲರ್‌ಗಳನ್ನು ಅಧಿಕಾರಿಗಳಿಗೆ ಕಳುಹಿಸಿದ್ದೀರಿ, ಇನ್ನು ೧೦ ಸರ್ಕ್ಯುಲರ್ ಕಳುಹಿಸಿದರೂ ಕೂಡ ಅಧಿಕಾರಿಗಳು ಆ ಕೆಲಸವನ್ನು ಮಾಡುವುದಿಲ್ಲ, ಆದ್ದರಿಂದ ಅಧಿಕಾರಿಗಳು ಸರ್ಕಾರದ ಆದೇಶವನ್ನು ಮೀರಿ ನಡೆದರೆ ಅದಕ್ಕೆ ಏನು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ವಾಯಿ ಅವರು ಇದೇ ಪ್ರಶ್ನೆಯನ್ನು ಈ ಸಭೆಯಲ್ಲಿ ತಂದಾಗ ಇದೇ ಸಭೆಯಲ್ಲಿ ನಾನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಅಧಿಕಾರ ಕೊಟ್ಟು ತಕ್ಷಣ ಎಲ್ಲೆಲ್ಲಿ ಮೆಕ್ಯಾನಿಕ್‌ಗಳನ್ನು ಅಪಾಯಿಂಟ್ ಮಾಡಿಲ್ಲ, ಅಲ್ಲಿ ಮೆಕಾನಿಕ್‌ಗಳನ್ನು ಅಪಾಯಿಂಟ್ ಮಾಡತಕ್ಕದ್ದು ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ಸರ್ಕ್ಯುಲರ್ ಕಳಿಸಿದೆ ಲೋಕಲ್ ಬಾಡಿಗಳವರು ರೆಸಂಪ್ಷನ್ ಮಾಡಿ ಮೆಕ್ಯಾನಿಕ್‌ಗಳನ್ನು ನೇಮಕ ಮಾಡಿಕೊಳ್ಳಬೇಕಾಗಿದೆ. ಇದರಿಂದಾಗಿ ಸ್ವಲ್ಪಮಟ್ಟಿಗೆ ಕಾಲ ವಿಳಂಬವಾಗಿದೆ. ಆ ರೀತಿ ವಿಳಂಬ ಮಾಡಿರತಕ್ಕದ್ದು ತಪ್ಪು. ಇನ್ನು ಮುಂದೆ ಅದನ್ನು ವಿಳಂಬ ಮಾಡಕೂಡದು ಎಂದು ಆದೇಶವನ್ನು ಕೊಟ್ಟಿದ್ದೇವೆ. ತೊಂದರೆಯನ್ನು ಪರಿಹಾರ ಮಾಡುವುದಕ್ಕೋಸ್ಕರ ಚೀಫ್ ಇಂಜಿನಿಯರ್ ನೇರವಾಗಿ ಸೂಕ್ತ ಕಾರ್ಯಕ್ರಮತೆಗೆದುಕೊಂಡು ಎಷ್ಟು ಬೋರ್‌ವೆಲ್‌ಗಳು ಚಾಲನೆಯಲ್ಲಿಲ್ಲವೋ ಅವುಗಳನ್ನು ರಿಪೇರಿ ಮಾಡತಕ್ಕದ್ದು ಎಂದು ಹುಕುಂ ಕೊಟ್ಟಿದ್ದೇವೆ.

Business of the House

MADAM SPEAKAR.—The calling attention notices given notice of by Sri K. H. Hanume Gowda, Sri T. R. Shamanna and others will be taken up tomorrow.

As Regards Papers to be laid on the Table today, this will also be taken up tomorrow as the Ministers concerned have intimated the about their absence.

Requests for Laying the Report of the Backward Classes Commission

ಶ್ರೀ ಕೆ ಎಂ. ನಾಗಣ್ಣ. (ಚಿಕ್ಕಪೇಟೆ).— ಮಾನ್ಯ ಅಧ್ಯಕ್ಷಣಿಯವರೇ, ನಾಳೆಗೆ ಹಿಂದುಳಿದ ಆಯೋಗದ ವರದಿಗೆ 6 ತಿಂಗಳು ಪೂರ್ತಿಯಾಗುತ್ತದೆ. 6 ತಿಂಗಳ ಒಳಗೆ ಆ ವರದಿಯನ್ನು ಈ ಸಭೆಯ ಮುಂದೆ ಇಡಬೇಕು, ನವಂಬರ್ 19ನೇ ತಾರೀಖು ನಾವು ಸರ್ಕಾರಕ್ಕೆ ಹಿಂದುಳಿದ ಆಯೋಗದ ವರದಿಯನ್ನು ಕೊಟ್ಟಿದ್ದೇವೆ. ಹೋದ ಸಾರಿ ಇದಕ್ಕೆ ಸಂಬಂಧಪಟ್ಟ ಸಚಿವರು ಆ ವರದಿಯು ಇನ್ನೂ ಪ್ರಿಂಟಾಗಿ ಬಂದಿಲ್ಲ ಇನ್ನು ಒಂದೆರಡು ತಿಂಗಳಲ್ಲಿ ಪ್ರಿಂಟಾಗಿ ಬರುತ್ತದೆ ಎಂದು ಹೇಳಿದ್ದರು, ಈಗ ಆ ವರದಿಯು ಅವಧಿಯು ಮುಗಿದು ವರದಿಯು ಸತ್ತು ಹೋದಂತಾಗಿದೆ. ಜೊತೆಗೆ ಹಿಂದುಳಿದ ಆಯೋಗದಲ್ಲದ್ದ ಸದಸ್ಯರೆಲ್ಲರೂ ಕೂಡ ಸತ್ತು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದೆ ತಕ್ಷಣ ನಾಳೆ ದಿವಸ ಆ ವರದಿಯನ್ನು ಈ ಸಭೆಯಮುಂದೆ ಇಡುವುದಿದ್ದರೆ ನಾನು ಸತ್ಯಾಗ್ರಹ ಮಾಡುತ್ತೇನೆ.

ಅಧ್ಯಕ್ಷರು.—ಹಾಗೆರ್ಯಾ ಮಾತನಾಡುವುದು ನಿರಿಯುಲ್ಲ ಈ ಬಗ್ಗೆ ಸರ್ಕಾರ ಏನು ಹೇಳುತ್ತಾರೆ ಎಂಬುದನ್ನು ನೋಡೋಣ.

ಶ್ರೀ ಎಚ್ ಎಂ ಚನ್ನಬಸಪ್ಪ.—ರಿಪೋರ್ಟ್ ಇಂಪ್ಲಿಮೆಂಟ್ ಮಾಡುವ ವಿಷಯದಲ್ಲಿ ಅದರಲ್ಲಿ ಏನೇನು ಬರೆದಿವ್ವಾರೆ ಎಂಬುವನ್ನು ಪರೀಕ್ಷೆ ಮಾಡಿ ಯಾವು ಯಾವುದು ಯೋಗ್ಯ ಎಂಬುದನ್ನು ಪರಿಶೀಲನೆ ಮಾಡಿ ಇಂಪ್ಲಿಮೆಂಟ್ ಮಾಡುವುದನ್ನು ಯೋಚನೆ ಮಾಡುತ್ತೇವೆ. ವರದಿಯನ್ನು ಈ ಸಭೆಯಮುಂದೆ ತಕ್ಷಣ ಇಡಬೇಕು ಎನ್ನುತಕ್ಕ ವಿಷಯದಲ್ಲಿ ಪರಿಶೀಲನೆ ಮಾಡಿ ನೂಕ್ಷ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ,

ಶ್ರೀ ಎಚ್.ಟಿ. ಕೃಷ್ಣಪ್ಪ.—ಪರಿಶೀಲನೆ ಮಾಡುತ್ತೆವೆ ಎಂದು ಹೇಳುವದು ಮಾಮೂಲು ಉತ್ತರ ಈ ಸದನದ ಕಾರ್ಯಕಲಾಪ ಮುಗಿಯುವುದರೊಳಗೆ ಈ ಅಧಿವೇಶನದಲ್ಲೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾವು ಈ ಅಧಿವೇಶನದ ಪ್ರಾರಂಭದಲ್ಲೇ ಒತ್ತಾಯವನ್ನು ತಂದಿದ್ದೇನೆ. ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಹೇಳುವುದು ಮಾಮೂಲಾಗಿ ಹೇಳತಕ್ಕ ಉತ್ತರ, ಈಗ ಇದರ ಪರಿಣಾಮ ಏನಾಗಿದೆ ಎಂಬುದು ನಮಗೆ ಬೇಕಾಗಿದೆ

SRI H. M. CHANNABASAPPA.—I have always said that Government will not fail to take appropriate action at the apropriate time.

SRI H. T. KRISHNAPPA.—I cannot understand the attitude of this Government. There is a method even in madness also.

1-30 P.M.

SRI H. M. CHANNABASAPPA.—Unfortunately there must be some thing wrong with Hon.ble Member. That is madness.

SRI H. T. KRISHNAPPA.—If at all there is anything wrong it is on his part.

SRI H. M. CHANNABASAPPA.—Sometimes people see madness where there is none That happens to be the case with the Hon.ble Member.

SRI H. T. KRISHNAPPA.—Telling something repeatedly without conveying any sense is madness.

ಅಧ್ಯಕ್ಷರು. —ಮ್ಯಾಡ್‌ನೆಸ್ ಮೇಲೆ ಉಪನ್ಯಾಸ ಬೇಡ.

ಶ್ರೀ ಸಿ ಬೈರೇಗೌಡ. — ಆ ಮತದಿಯುಲ್ಲರತಕ್ಕ ಅಂಶಗಳನ್ನು ಕಾರ್ಯಗತ ಮಾಡುವುದು ಬೇರೆ ಅಂಶ. ಅದನ್ನು ಸಭೆಯ ಮುಂದೆ ಇಟ್ಟಿಲ್ಲ ಅಂದರೆ ಏನು ?

ಅಧ್ಯಕ್ಷರು.—ನಾಳೆವರೆಗೂ ವೇಳೆ ಇದೆಯಲ್ಲ.

ಶ್ರೀ ಸಿ. ಬೈರೇಗೌಡ.—ನಾಳೆ ಇಡುತ್ತಾರೋ ಇಲ್ಲವೋ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು.—ಅದನ್ನು ಈಗ ಅವರು ಏಕೆ ಹೇಳಬೇಕು.

ಶ್ರೀ ಎಚ್.ಟಿ. ಕೃಷ್ಣಪ್ಪ.—ಇಲ್ಲದಿದ್ದರೆ ನಾಳೆ ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ ಎಂದು ತಿಂಗಳ ಮೇಲಾಯಿತು, ಹಿಂದೆ ಪರಿಶೀಲನೆಮಾಡುತ್ತೇವೆ ಎಂದು ಹೇಳಿದ್ದರು. ಆರೀತಿ ಪರಿಶೀಲನೆ ಮಾಡಿದ್ದರೆ ಪ್ರತಿಫಲ ಏನಾಯಿತು ಎಂದು ಕೇಳುತ್ತಿದ್ದೇವೆ. ಈಗ ಪುನಃ ಅದೇ ಉತ್ತರ ಕೊಟ್ಟರೆ ಹೇಗೆ ?

SRI H. M. CHANNABASAPPA.—If Government has given any assurance to this House, that assurance will be kept up.

ಶ್ರೀ ಎಂ ಎಸ್. ಕೃಷ್ಣನ್.—ಸಭೆ ಮುಂದೆ ಯಾವಾಗ ಇಡುತ್ತೀರಿ ಎನ್ನುವುದನ್ನು ಹೇಳಬೇಕು

SRI H. M. CHANNABASAPPA.—At the appropriate time.

SRI M. S. KRISHNAN.—An assurance has already been given that it will be placed on the table. The time to place is on the table is nearing Tomorrow is the last day. Will the Hon,ble Minister say that he will resign if it is not placed tomorrow on the table ?

SRI H. M. CHANNABASAPPA.— It is a hypothetical question. Why should he presume all those things ?

SRI M. S. KRISHNAN.—His answer is equally hypothetical.

SRI H. M. CHANNABASAPPA.—If the Government has given an assurance to this House, I categorically state that, assurance will be honoured.

SRI M. S. KRISHNAN.—It has been given.

SRI H. M. CHANNABASAPPA —If it is given, it will be honoured.

ಶ್ರೀ ಕೆ.ಎಂ. ನಾಗಣ್ಣ.—ಅದರ ಅವಧಿ ನಾಳೆಗೆ ಮುಗಿದು ಹೋಗುತ್ತದೆ. ಅದ್ದರಿಂದ ಕೇಳುತ್ತಾ ಇದ್ದೇನೆ.

ಅಧ್ಯಕ್ಷರು.—ನಾಳೆವರೆಗೂ ಅವಧಿ ಇದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ, ನಾಗಣ್ಣ —ಸಭೆಯ ಮುಂದೆ ಮಡಗುತ್ತೇವೆ. ಎಂದು ಹೇಳಿಬಿಡಲಿ.

SRI H. M. CHANNABASAPPA.—Government has already said that if assurance has been given, it will be honoured.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯಮಂತ್ರಿಗಳು ಕೇಳುವುದು ನೋಡಿದರೆ ಏನಾಮೇಷ ಮಾಡುತ್ತೀದ್ದೀರಿ ಎಂದು ಕಾಣುತ್ತದೆ. ಅವರು ಸಭೆಯ ಮುಂದೆ ಇಡುತ್ತೇವೆಂದು ಹೇಳಲಿ.

ಅಧ್ಯಕ್ಷರು.—ಅವರ ಭಾಷೆ ಅರ್ಥವಾಗುವುದಿಲ್ಲವೇ ? ಇನ್ನೂ 24 ಗಂಟೆ ಅವಧಿ ಇದೆ. ಮಾನ್ಯ ಸದಸ್ಯರ ಭಾಷೆಯಲ್ಲೇ ಹೇಳಬೇಕು ಎಂದರೆ ಹೇಗೆ ?

ಶ್ರಿ ಎಂ.ಎಸ್. ಕೃಷ್ಣನ್.—ಅವರು ನನಗೆ ಅರ್ಥವಾಗುವ ಭಾಷೆಯಲ್ಲಿ ಹೇಳುವುದಿಲ್ಲ ಎಷ್ಟೋ ದಿವಸಗಳಿಂದ ಚನ್ನಬಸಪ್ಪನವರನ್ನು ನೋಡುತ್ತಿದ್ದೇವೆ ಅವರು ಹೀಗೇಹೇಳಿ ತಪ್ಪಿಸಿಕೊಳ್ಳುತ್ತಿದ್ದಾರೆ, ಇದು ಮುಖ್ಯವಾದ ವಿಷಯ, ಆದುದರಿಂದ ಕೇಳುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ನಾಳೆದಿವಸ ಸಭೆಯ ಮುಂದೆ ಪೇಪರ್ಸ್ ಲೇ ಮಾಡುವಾಗ, ಆದನ್ನು ಲೇ ಮಾಡದೇ ಹೋದರೆ ಅವರ ಕರೆನ್ಸಿ ಹೊರಟು ಹೋಗುತ್ತದೆ. ಅವರು ಅಪ್ಲೈ ರೆನ್ಸ್ ಮಾಡಲಿ, ಬಿಡಲಿ, ಆದು ಲ್ಯಾಪ್ಸ್ ಆಗುತ್ತದೆ,

SRI H. M. CHANNABASAPPA.—If the Hon'ble Member is not able to understand simple English and simple Kannada, I cannot help it.

SRI H. T. KRISHNAPPA.—Why does he not straightway answer our questions and say that he is going to place it on the table tomorrow.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದಹಾಗೆ ಅವರು ಭಾಷೆಯಲ್ಲೇ ಮಾತನಾಡಬೇಕೇ ?

SRI M. S. KRISHNAN.—All right Madam,

ಶ್ರೀ ಕೆ. ಎಂ. ನಾಗಣ್ಣ.—ಅವರ ಭಾಷೆಯನ್ನು ಕೇಳಿಕೊಂಡು ಇಷ್ಟು ದಿವಸ ಕುಳಿತುಕೊಂಡಿದ್ದೇವೆ. ಇನ್ನು ಮುಂದೆ ಅವರ ಬರುವುದಿಲ್ಲ ಎಂದು ಕಾಣುತ್ತದೆ. ಏಕೆಂದರೆ, ಅವರು ಮಂತ್ರಿಗಳಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. If the Government has give an assurance ಅಂದರೆ ಏನು ಅರ್ಥ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅನುಮಾನಕ್ಕೆ ಎಡೆ ಇಲ್ಲದಂತೆ ಹೇಳಿದ್ದೇನೆ.

SRI H. T. KRISHNAPPA.—It is not as if we are always in the habit of pestering the Govenment for no reason whatsoever. We did put a question and we got answer. That assuarence is now to be kept up by Government.

SRI H. M. CHANNABASAPPA.—It will be kept up. I will look into the assurance and whatever assruance has been given will be kept up.

ಶ್ರೀ ಕೊಣಂದೂರು ಲಿಂಗಪ್ಪ.—ನಮಗೆ ಕಳಕಳಿ ಎನೆಂದರೆ ಹಿಂದುಳಿದ ಆಯೋಗದ ವರದಿ ಬರುತ್ತದೆಂದು ಲಂಕ್ಷಾತರ ಜನ ನೀರಿಕ್ಷೆ ಮಾಡುತ್ತಿದ್ದಾರೆ. ಕಳೆದ 3 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕದೆ ಮತ್ತು ಬೇರೆ ಬೇರೆ ಸವಲತ್ತು ಸಿಕ್ಕದೆ ತೊಂದರೆಯಾಗಿದೆ. ಇದು 3 ಕೋಟಿ ಜನರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ನಾಳೆ ದಿವಸ ಅದು ಲ್ಯಾಪ್ಸ್ ಆದರೆ ಅವರು ನಫರ್ ಮಾಡ ಬೇಕಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—ತಾವು ಹೇಳಿದ್ದೀರಿ. ನಾಳೆವರೆಗೂ ಅದನ್ನು ಫ್ಲೋಸ್ ಮಾಡುವುದಕ್ಕೆ ಅವಧಿ ಇದೆ. ನಾಳೆ ಫ್ಲೋಸ್ ಮಾಡದೇ ಹೋದರೇ ತಮಗೆ ಕೇಳುವುದಕ್ಕೆ ಬರುತ್ತದೆ. ನಾಳೆಯೇ ಫ್ಲೋಸ್ ಮಾಡಬೇಕು ಎಂದು ಇಲ್ಲ, ಇವತ್ತೇ ಫ್ಲೋಸ್ ಮಾಡಬಹುದು. ಇವತ್ತು ತಪ್ಪಿದರೆ ನಾಳೆ ಮಾಡುತ್ತೇವೆ. ನಾಳೆ ಮಾಡದೇ ಹೋದರೆ ನಮ್ಮ ತಪ್ಪು ಬರುತ್ತದೆ, ಆಮೇಲೆ ಕೇಳಿ.

Business of the House

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಮೊನ್ನೆ ದಿವಸ ರೂಲ್ 312ರ ಕೆಳಗೆ ಒಂದು ವಿಷಯವನ್ನು ಪ್ರಸ್ತಾಪಮಾಡಲು ತಮ್ಮ ಅನುಮತಿಯನ್ನು ಕೇಳಿದ್ದೇನೆ. ಲಾರೆನ್ಸ್ ಫರ್ನಾಂಡಿಸ್ ಎನ್ನುವವರ ಬಗ್ಗೆ ಕೇಳಿದ್ದೇನೆ. ಒಂದನೇ ತಾರೀಖು ಪೋಲೀಸರು ಅವರನ್ನು ಕರದುಕೊಂಡು ಹೋಗಿದ್ದಾರೆ, ಎಲ್ಲಿ ಇಟ್ಟಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ಅದನ್ನು ಸರಕಾರದವರಿಗೆ ಕಳಿಸಿದ್ದೇವೆ. ಅದು ಬಂದ ತಕ್ಷಣ ಅಜೆಂಡಾನಲ್ಲಿ ಸೇರಿಸುತ್ತೇವೆ. ಆಷ್ಟರಲ್ಲಿ ಅವಸರ ಮಾಡಿದರೆ ಹೇಗೆ ?

ಶ್ರೀ ಕೊಣಂದೂರು ಲಿಂಗಪ್ಪ.—ಇವತ್ತು ಮತ್ತೊಂದು ನೋಟೀಸು ಕಳಿಸಿದ್ದೇನೆ. ರಾಜ್ಯ ವಿಕ್ರಮ ಸಿನಿಮಾಕ್ಕೆ ಟ್ಯಾಕ್ಸ್ ಫ್ರೀ ಮಾಡಿದ್ದಾರೆ. ಯಾವ ಕಾರಣಗಳಿಂದ ಮಾಡಿದ್ದೀರಿ ಎಂದು ಕೇಳಿದ್ದೇನೆ.

ಅಧ್ಯಕ್ಷರು.—ಸರ್ಕಾರದಿಂದ ಉತ್ತರ ಬಂದ ಮೇಲೆ ಅದನ್ನು ಅಜೆಂಡಾದಲ್ಲಿ ಸೇರಿಸುತ್ತೇವೆ.

MADAM SPEAKER.—Is there any Hon'ble Member who wants to participate in the discussion of the Karnataka Municipal Corporations Bill, 1975 ?

(No member rose to speak)

SRI D. K. NAIKAR.—Since we are considering certain amendments to this Bill, this may be taken up day after tomorrow. Instead, we may take up the Karnataka Small Cause Courts (Amendment) Bill, 1975 which is a small amending Bill.

SRI M. S. KRISHNAN.—In the agenda, the next item is the Karnataka Municipalities (Amendment) Bill, 1976 for which we have come prepared. I would therefore request the Hon'ble Speaker to see that the discussion on this Bill take place.

SRI D.K NAIKAR.—I seek the permission of the Chair to take up the Small Cause Courts (Amendment) Bill first.

SRI M.S. KRISHNAN.—I do not think it is in accordance with the Rules of Procedure,

ಅಧ್ಯಕ್ಷರು —ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಮತ್ತು ಅಜೆಂಡಾ ಪ್ರಕಾರ ಹೋಗು ತ್ತೇವೆ ಆದರೆ ಮಂತ್ರಿಗಳು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದಾರೆ.

ಶ್ರೀ ಡಿ. ಕೆ. ನಾಯ್ಕರ್.—ಇದು ಮುಗಿಯಲಿ ಆದನ್ನು ಆಮೇಲೆ ಮಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಇದು ನಡೆಯಬಹುದು ಎಂದು ನಾವು ತಿಳಿಯಾಗಿ ಬಂದಿದ್ದೇವೆ.

ಅಧ್ಯಕ್ಷರು.—ಇದನ್ನು ಮುಗಿಸಿಬಿಡಿ ಎಂದು ಅವರು ಕೇಳುತ್ತಾ ಇದ್ದಾರೆ.

KARNATAKA SMALL CAUSE COURTS (AMENDMENT) BILL, 1975. (Motion to Consider)

SRI D. K. NAIKAR (Minister for Law and Municipal Administration).—I beg to move.

That the Karnataka Small Cause Courts (Amendment) Bill, 1975 be taken into consideration.

MADAM SPEAKER.—Motion moved.

That the Karnataka Small Cause Courts (Amendment) Bill, 1975 be taken into consideration.

† ಶ್ರೀ ಡಿ. ಕೆ. ನಾಯ್ಕರ್ —ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಸ್ಮಾಲ್‌ಕಾಸ್ ಕೋರ್ಟ್ ವಂಸೂದೆ ೧೯೬೪ರಲ್ಲಿ ಪಾಸ್ ಆಯಿತು. ಇದರ ಪ್ರಕಾರ ನಮ್ಮ ರಾಜ್ಯದಲ್ಲಿ ಸ್ಮಾಲ್ ಕಾಸ್ ಕೋರ್ಟ್ ಎಸ್ಟಾಬ್ಲಿಷ್ ಮಾಡಿದ್ದಾರೆ. ಐದುನೂರು ರೂಪಾಯಿಗಿಂತ ಕಡಿಮೆ ವ್ಯಾಲ್ಯೂ ಇರತಕ್ಕ ಸಿವಿಲ್ ಸೂಟ್‌ಗಳನ್ನು ಅವರು ಡಿಸೈಡ್ ಮಾಡುತ್ತಾರೆ. ಹೈಕೋರ್ಟ್ ಒಪ್ಪಿಗೆ ಮೇರೆಗೆ ಎರಡು ಸಾವಿರ ರೂಪಾಯಿ ಬೆಲೆಯ ಸೂಟ್‌ಗಳನ್ನು ಕೂಡ ತೀರ್ಮಾನ ಮಾಡುವ ಅಧಿಕಾರ ಕೊಡಬಹುದಾಗಿದೆ. ಎರಡು ಸಾವಿರ ರೂಪಾಯಿ ಇದ್ದುದನ್ನು ಮೂರು ಸಾವಿರ ರೂಪಾಯಿಗೆ ಈಗ ಏರಿಸಿರುವುದರಿಂದ ಸ್ಮಾಲ್